SRI H C. SRIKANTAIAH—During my last visit to Belgaum, we have taken a policy decision that any new school building will have a three language school, viz., Kannada, Urdu and Marati.

SRI B.B. SAYANAK—When the people of that area are requesting for a Marati school, why should the Government insist on three languages ?

SRI H. C. SRIKANTAIAH—Sir, the hon. member accepted on the spot to construct these three-language schools wherever the Corporation is going to construct the new schools.

Taken over PWD Roads in Krishnarajpet Taluk

461 SRI S. M. LINGAPPA (Krishnarajpet)—Will the Minister for Public Works be pleased to state :

(a) the number of roads taken over by the Public Works Department in Krishnarajpet taluk during the years 1975-76 and 1977-78 ;

(b) the names of these roads ;

(c) after taking over these roads, the amount spent on each of these roads for repairs ;

(d) after taking over these roads, to what extent each of these roads have been improved ?

SRI S. BANGARAPPA (Minister for Public Works)—

(a) The Public Works Department has taken over 11 Roads during 1975-76 and 9 roads in 1977-78.

(b) (c) and (d) The details are furnished in the list which is placed on the Table of the House.

ಶ್ರೀ ಎಸ್. ಎಂ. ಲಿಂಗಪ್ಪ—ಸ್ವಾಮಿ, ನನ್ನ ಪ್ರಶ್ನೆಗಳಿಗೆ ತಾವು ಉತ್ತರವನ್ನು ಒದಗಿಸಿದ್ದೀರಿ, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ನಾನು ಕೇಳಿರುವ ೨೦ ರಸ್ತೆಗಳ ಪೈಕಿ ಅನೇಕ ರಸ್ತೆಗಳಿಗೆ ಜಿ-೬ ವರ್ಷದಿಂದ ಯಾವ ರಿಪೇರಿ ಕೆಲಸ ನಡೆದಿಲ್ಲ ಎಂದು ಹೇಳಿದ್ದೀರಿ. ಅದಕ್ಕೆ ಕಾರಣ ಏನು ಸ್ವಾಮಿ ?

† ಶ್ರೀ ಎಸ್. ಬಂಗಾರಪ್ಪ—ಸ್ವಾಮಿ, ನನ್ನ ಮುಂದೆ ಇರತಕ್ಕ ಪಟ್ಟಿ ಪ್ರಕಾರ ಸುಮಾರು ೬ ರಸ್ತೆಗಳಿಗೆ ಹಣವನ್ನೂ ಒದಗಿಸಿ ಕೆಲಸವನ್ನು ಪ್ರಾರಂಭ ಮಾಡಲಾಗಲಿಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ಆದ್ಯತೆಯ ಮೇಲೆ ಯಾವುದು ಅವಶ್ಯಕತೆ ಇದೆ ಎಂಬುದನ್ನು ನೋಡಿಕೊಂಡು ಆದಕ್ಕನುಗುಣವಾಗಿ ಹಣವನ್ನು ಒದಗಿಸಿ ಕೆಲಸ ಮಾಡತಕ್ಕ ನೀತಿಗನುಗುಣವಾಗಿ ಕೆಲಸ ಮಾಡಲಾಗಿದೆ. ಉಳಿದ ರಸ್ತೆಗಳಿಗೆ ಹಣವನ್ನು ಒದಗಿಸಿ ಕೆಲಸ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ತಾವು ಪ್ರಸ್ತಾಪಿಸಿರುವ ರಸ್ತೆಗಳು ಪ್ರಾಮುಖ್ಯವಾದುದಾದರೆ ಹಣದ ಅನುಕೂಲತೆಯನ್ನು ನೋಡಿಕೊಂಡು ತೆಗೆದುಕೊಳ್ಳತಕ್ಕ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎಸ್. ಎಂ. ಲಿಂಗಪ್ಪ—ಈಗ ಕೆಲಸ ನಡೆಯುದೇ ಇರತಕ್ಕ ರಸ್ತೆಗಳ ಪೈಕಿ ಕೆಲವು ಪ್ರಾಮುಖ್ಯವಾದ ರಸ್ತೆಗಳೂ ಇವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ— ಸ್ವಾಮಿ. ನಾನು ಸಭೆಯ ಮುಂದಿಟ್ಟಿರುವ ರಸ್ತೆಗಳ ಪಟ್ಟಿಯಲ್ಲಿ ಕೆಲವು ಪ್ರಾಮುಖ್ಯವಾದುದಾದ್ದರಿಂದಲೇ ನಾವು ಹಣವನ್ನು ಖರ್ಚು ಮಾಡಿದ್ದೇವೆ. ಇನ್ನೂ ಕೆಲವು ರಸ್ತೆಗಳು ಅಷ್ಟು ಪ್ರಾಮುಖ್ಯವಲ್ಲ ಎಂಬ ಕಾರಣದಿಂದ ಕೆಲಸ ಮಾಡಿರುವುದು ನಿಧಾನವಾಗಿರಬಹುದು.

ಶ್ರೀ ಎಸ್. ಎಂ. ಲಿಂಗಪ್ಪ—ಈ ರಸ್ತೆಗಳನ್ನು ಸರ್ಕಾರ ವಹಿಸಿಕೊಂಡು ೫ ವರ್ಷವಾಗಿದೆ. ಅಲ್ಲಿ ಅನೇಕ ಕ್ರಾಸ್ ಡ್ರೈನೇಜ್ ಕೆಲಸವೇ ನಡೆದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಬಂಗಾರಪ್ಪ—ಮಾನ್ಯ ಅಧ್ಯಕ್ಷರೇ. ಕೆಲವು ಕಡೆ ಆಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ನಾವು ಇರತಕ್ಕ ಹಣದಲ್ಲಿ ಅನೇಕ ರಸ್ತೆಗಳಿಗೆ ಕ್ರಾಸ್ ಡ್ರೈನೇಜ್ ಮತ್ತಿತರ ಕೆಲಸಗಳನ್ನು ಮಾಡಿದ್ದೇವೆ. ಇದರಲ್ಲಿ ಕೆಲವು ಐ.ಸಿ.ಆರ್.ಸಿ. ರೋಡ್ಸ್ ಇವೆ. ಇಂಥವನ್ನು ತೆಗೆದುಕೊಂಡಿದ್ದೇವೆ. ಇನ್ನು ಕೆಲವು ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಹಣ ಸಿಕ್ಕಿದ ಹಾಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಲಿಂಗಪ್ಪ—ಕಳೆದ ವರ್ಷ ಪ್ರತಿಯೊಬ್ಬ ಶಾಸಕರಿಗೂ ಸುತ್ತೋಲೆಯನ್ನು ಕಳುಹಿಸಿ ಕ್ರಾಸ್ ಡ್ರೈನೇಜ್ ವರ್ಕ್ಸ್ ನಿಮ್ಮ ಕ್ಷೇತ್ರದಲ್ಲಿ ಯಾವುದನ್ನು ತೆಗೆದುಕೊಳ್ಳಬೇಕು ಎಂದು ಕೇಳಿದ್ದೀರಿ. ಅದರಂತೆ ನಮ್ಮಲ್ಲಿ ಪ್ರಾಮುಖ್ಯವಾದ ರಸ್ತೆಗಳಲ್ಲಿ ಇರತಕ್ಕ ಕ್ರಾಸ್ ಡ್ರೈನೇಜ್ ವರ್ಕ್ಸ್ ತೆಗೆದುಕೊಳ್ಳಬೇಕೆಂದು ಪಟ್ಟಿಯನ್ನು ಕೊಟ್ಟಿದ್ದೆವು. ಆದರ ಮೇಲೆ ಇದುವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇದಕ್ಕೆ ಕಾರಣ ಏನು ಎಂಬುದನ್ನು ಹೇಳುತ್ತೀರಾ ಸ್ವಾಮಿ?

ಶ್ರೀ ಎಸ್. ಬಂಗಾರಪ್ಪ—ಸ್ವಾಮಿ, ನಾವು ಕ್ರಮ ತೆಗೆದುಕೊಂಡಿದ್ದೇವೆ. ಮಾರ್ಕೆಟ್ ಸೆಸ್‌ನಿಂದ ಬಂದಿರತಕ್ಕ ೪ ಕೋಟಿ ರೂಪಾಯಿ ಹಣ ಏನಿತ್ತು ಅದರಲ್ಲಿ ಎಷ್ಟೆಷ್ಟು ಖರ್ಚು ಮಾಡಬೇಕೋ ನೋಡಿಕೊಂಡು ಕೆಲಸ ಮಾಡುತ್ತಾ ಹೋಗಿದ್ದೇವೆ. ಮಾನ್ಯ ಸದಸ್ಯರು ಹೇಳುವಂತೆ ಆ ಕೆಲಸಗಳನ್ನು ಮಾಡುವುದಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಅದಕ್ಕೆ ಹಣಕಾಸಿನ ಇಲಾಖೆಯೂ ಒಪ್ಪಿಗೆ ಕೊಟ್ಟಿದೆ. ಈ ತಿಂಗಳು ೧೭ನೇ ತಾರೀಖಿನ ನಮ್ಮ ಇಲಾಖೆ ಬೇಡಿಕೆ ಸಭೆಯ ಮುಂದೆ ಬರುತ್ತದೆ. ಅಷ್ಟರೊಳಗೆ ಈ ಕೆಲಸವನ್ನು ಮಾಡಿಕೊಡಬೇಕೆಂದು ಇದ್ದೇವೆ. ಎಲ್ಲೆಲ್ಲಿ ಕೆಲಸ ಮಾಡಬೇಕೆಂಬ ಬಗ್ಗೆ ಪಟ್ಟಿ ಸಿದ್ಧವಾಗಿದೆ. ಒಂದು ವೇಳೆ ೧೭ನೇ ತಾರೀಖಿನೊಳಗೆ ಆಗದಿದ್ದರೂ ಕೂಡ ಅದಾದ ಒಂದು ವಾರದಲ್ಲೇ ಕೆಲಸ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಎಂ. ಲಿಂಗಪ್ಪ—ಮುಖ್ಯವಾಗಿ ತಾಲೂಕ್ ಕೇಂದ್ರವಾದ ಕೃಷ್ಣರಾಜಪೇಟೆಯಿಂದ ಹೋಬಳಿ ಕೇಂದ್ರವಾದ ಶಿರಳ್ಕಿಗೆ ಹೋಗತಕ್ಕ ರಸ್ತೆ ಏನಿದೆ ಅದರ ಮಧ್ಯದಲ್ಲಿ ಹಿರಲಹಳ್ಳಿ ಗ್ರಾಮದ ಬಳಿ ಹೈಲೆವೆಲ್ ಕಾಸ್‌ವೇ ಆಗಬೇಕೆಂದು ನಾವು ಕೇಳಿಕೊಂಡಿದ್ದೇವೆ. ಅದೇ ರೀತಿ ಕೃಷ್ಣರಾಜಪೇಟೆಯಿಂದ ಮೇಲುಕೋಟೆ ಮಾರ್ಗವಾಗಿ ಮಂಡ್ಯಕ್ಕೆ ಹೋಗತಕ್ಕ ರಸ್ತೆಯಲ್ಲಿ ವಸಂತಪುರದಿಂದ ಕಿರಿಕೊಪ್ಪಲಿಗೆ ಹೋಗತಕ್ಕ ರಸ್ತೆಗೂ ಹೈಲೆವೆಲ್ ಕಾಸ್‌ವೇ ಆಗಬೇಕೆಂದು ಕೇಳಿದ್ದೆವು. ಅದನ್ನು ಮಂಜೂರು ಮಾಡಿಸಿ ಕೆಲಸ ಮಾಡಿಸಿಕೊಡುತ್ತೀರಾ ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ—ಮಾನ್ಯ ಸದಸ್ಯರು ಹೇಳಿರತಕ್ಕಂತಹ ಎರಡು ರಸ್ತೆಗಳಲ್ಲಿ ಬರತಕ್ಕಂತಹ ಸೇತುವೆಗಳು ಅಥವಾ ಬೇರೆ ಕಾಮಗಾರಿಗಳ ಅದ್ಯತೆ ವಿವರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಅವರು ಪತ್ರಬರೆದರೆ ನಾನು ತಿಳಿದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹೇಳಿರುವಂತಹ ಪ್ರಶ್ನೆಗೆ ಏಕೆ ಇಲ್ಲೇ ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲವೆಂದರೆ, ಅದರ ಅಂದಾಜು ಎಷ್ಟು ಹಣದ ಲಭ್ಯತೆಯನ್ನೊಳಗೊಂಡು ಉತ್ತರ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಪತ್ರ ಬರೆದರೆ ಅದನ್ನು ವಿಚಾರಿಸಿ ಅವರಿಗೆ ತಿಳಿಸುತ್ತೇನೆ.

ಶ್ರೀ ಎಂ. ಸಿ. ಬಸಪ್ಪ —ತಮ್ಮ ಇಲಾಖೆಯವರು ಈ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿಲ್ಲವೆ ?

ಶ್ರೀ ಎಸ್. ಬಂಗಾರಪ್ಪ—ಈ ಪ್ರಶ್ನೆಯಲ್ಲಿ ಅದು ಉದ್ಭವಿಸುವುದಿಲ್ಲ. ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರ ಒದಗಿಸುತ್ತೇನೆ.